ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1550
2	ವಿಧಾನ ಪರಿಷತ್ತು ಸದಸ್ಯರ ಹೆಸರು	:	ಶ್ರೀ. ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
3	ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.
4	ಉತ್ತರಿಸಬೇಕಾದ ದಿನಾಂಕ	:	11.03.2022.

ಪ್ರಶ್ನೆ	ಉತ್ತರ
ಅ) ಬೀದರ್ ಜಿಲ್ಲೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಯೋಜನೆಯಡಿಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ;	ಬೀದರ್ ಜಿಲ್ಲೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಕ್ರ. ಸಂ	ಕಾರ್ಯಕ್ರಮಗಳು
1	ಹೊಸ ಪ್ರದೇಶ ವಿಸ್ತರಣೆ (ಹಣ್ಣುಗಳು, ಹೈಬ್ರಿಡ್ ತರಕಾರಿ, ಹೂವಿನ ಬೆಳೆಗಳು)
2	ಮೊದಲನೇ ಮತ್ತು ಎರಡನೇ ವರ್ಷದ ನಿರ್ವಹಣೆ
3	ಅಣಬೆ ಉತ್ಪಾದನಾ ಘಟಕ
4	ಪುನಃಶ್ಚೇತನ
5	ನೀರು ಸಂಗ್ರಹಣಾ ಘಟಕ (ವೈಯಕ್ತಿಕ ಕೃಷಿಹೊಂಡ, ಸಮುದಾಯ ಕೆರೆ)
6	ಪಾಲಿಮನೆ (ಘಟಕ + ಬೆಳೆ ಬೆಳೆಯಲು)
7	ನೆರಳು ಪರದೆ (ಘಟಕ + ಬೆಳೆ ಬೆಳೆಯಲು)
8	ಪ್ಲಾಸ್ಟಿಕ್ ಹೊದಿಕೆ
9	ಸಮಗ್ರ ಪೋಷಕಾಂಶ ನಿರ್ವಹಣೆ
10	ಯಾಂತ್ರೀಕರಣ (ಟ್ರ್ಯಾಕ್ಟರ್, ಪವರ್ ಟಿಲ್ಲರ್)
11	ಕೊಯ್ಲೋತ್ತರ ನಿರ್ವಹಣೆ (ಪ್ಯಾಕ್ ಹೌಸ್, ಸಮಗ್ರ ಪ್ಯಾಕ್ ಹೌಸ್, ಪ್ರಾಥಮಿಕ ಸಂಸ್ಕರಣಾ ಘಟಕ, ಹಣ್ಣು ಮಾಗಿಸುವ ಘಟಕ, ಈರುಳ್ಳಿ ಸಂಗ್ರಹಣಾ ಘಟಕ)
12	ತಳ್ಳುವ ಗಾಡಿ
13	ಪ್ರಚಾರ ಮತ್ತು ಸಾಹಿತ್ಯ

ಪ್ರಶ್ನೆ	ಉತ್ತರ
ಆ) ಕಳೆದ 3 ವರ್ಷದಲ್ಲಿ ರಾಜ್ಯ ಮತ್ತು ಜಿಲ್ಲಾ ವಲಯಗಳಲ್ಲಿ ಕಾರ್ಯಕ್ರಮವಾರು ಒದಗಿಸಿರುವ ಬಿಡುಗಡೆಯಾಗಿರುವ ಮತ್ತು ವೆಚ್ಚವಾಗಿರುವ ಅನುದಾನ ಎಷ್ಟು;	ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಅಂದರೆ 2018-19, 2019-20 ಹಾಗೂ 2020-21 ರಲ್ಲಿ ರಾಜ್ಯ ಮತ್ತು ಜಿಲ್ಲಾವಲಯಗಳಲ್ಲಿ ಒದಗಿಸಿರುವ ಅನುದಾನ ರೂ.1809.20 ಲಕ್ಷಗಳು, ಬಿಡುಗಡೆಯಾಗಿರುವ ಅನುದಾನ ರೂ. 1729.27 ಲಕ್ಷಗಳು ಮತ್ತು ವೆಚ್ಚವಾಗಿರುವ ಅನುದಾನದ ರೂ.1666.24 ಲಕ್ಷಗಳು. ಕಾರ್ಯಕ್ರಮವಾರು ಒದಗಿಸಿರುವ, ಬಿಡುಗಡೆಯಾಗಿರುವ ಮತ್ತು ವೆಚ್ಚವಾಗಿರುವ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ)ಕೃಷಿ ಉಪಕರಣ ಹನಿ / ತುಂತುರು ನೀರಾವರಿ ಪಡೆದಿರುವ ತೋಟಗಾರಿಕಾ ಕೃಷಿಕರ ಸಂಖ್ಯೆ ಎಷ್ಟು;	ಕೃಷಿ ಉಪಕರಣ ಹಾಗೂ ಹನಿ ನೀರಾವರಿ ಪಡೆದಿರುವ ತೋಟಗಾರಿಕಾ ಕೃಷಿಕರ ಸಂಖ್ಯೆ ಅನುಕ್ರಮವಾಗಿ 409 ಮತ್ತು 8307 ಇರುತ್ತದೆ.ತುಂತುರು ನೀರಾವರಿ ಉಪಕರಣಗಳಿಗೆ ಸಹಾಯಧನ ನೀಡಿರುವುದಿಲ್ಲ.
ಈ) ತಾಲ್ಲೂಕುಗಳಲ್ಲಿ ಮಳೆ ನೀರು ಸಂಗ್ರಹಣೆ ಘಟಕ, ನಿರ್ಮಿಸಲು ಇರುವ ನಿಯಮಗಳೇನು; ಇದಕ್ಕಾಗಿ ಎಷ್ಟು ಪ್ರದೇಶ ಬಾಕಿ ಇರುವ ಪ್ರಸ್ತಾವನೆಗಳಿಗೆ ಎಷ್ಟು ಸಹಾಯಧನ ಮೀಸಲಿಡಲಾಗಿದೆ;	ರೈತರ ತಾಕುಗಳಲ್ಲಿ ಮಳೆ ನೀರು ಸಂಗ್ರಹಣೆ ಘಟಕ, ನಿರ್ಮಿಸಲು ಈ ಕೆಳಕಂಡ ನಿಯಮಾನುಸಾರ ಫಲಾನುಭವಿಗಳ ಆಯ್ಕೆ ಮಾಡಲಾಗುವುದು. 1. ವೈಯಕ್ತಿಕ ನೀರು ಸಂಗ್ರಹಣಾ ಘಟಕಕ್ಕೆ ಸಣ್ಣ ಮತ್ತು ಅತೀ ಸಣ್ಣ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು 0.2 ಹೆ. ಹಾಗೂ ಇತರೆ ರೈತರು 0.40 ಹೆ. ಜಮೀನಿನಲ್ಲಿ ಕಡ್ಡಾಯವಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆದಿರಬೇಕು / ಬೆಳೆಯಬೇಕು. ಸರ್ವೆ ನಂಬರ್, ತೋಟಗಾರಿಕೆ ಬೆಳೆಯ ಹೆಸರು ಮತ್ತು ಬೆಳೆಗಳ ವಿಸ್ತೀರ್ಣದ ಬಗ್ಗೆ ಮಾಹಿತಿಯನ್ನು ನೀಡತಕ್ಕದ್ದು. 2. ಜಂಟಿ ಖಾತೆಯಾಗಿದ್ದಲ್ಲಿ, ಇತರೆ ಖಾತೆದಾರರ ಒಪ್ಪಿಗೆ ಪತ್ರವನ್ನು ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿಅರ್ಜಿಸಲ್ಲಿಸತಕ್ಕದ್ದು. 3. ಸಮುದಾಯ ನೀರು ಸಂಗ್ರಹಣ ಘಟಕದ ಸವಲತ್ತನ್ನು ನೋಂದಾಯಿತ /ನೋಂದಾಯಿತವಲ್ಲದ ರೈತರ ಸಂಘ/ಸಂಸ್ಥೆ/ಗುಂಪುಗಳಿಗೆ ನೀಡಲಾಗುವುದು. ಸಂಘದಲ್ಲಿ ಕನಿಷ್ಠ 3 ಜನ ರೈತರು ಇರಬೇಕಾಗುತ್ತದೆ. ಇವರಲ್ಲಿ ಪಾಲ್ಗೊಳ್ಳುವ ಎಲ್ಲಾ ರೈತರು ಸಂಘದ/ ಸಂಸ್ಥೆಯ ಸದಸ್ಯರು ಅಥವಾ ಪದನಾಮ ಹೊಂದಿರಬೇಕು ಮತ್ತು ಪಾಲ್ಗೊಳ್ಳುವ ಸದರಿ ರೈತರ ಹೆಸರಿನಲ್ಲಿ ಪಹಣಿ ಇರಬೇಕು. ಸಮುದಾಯ ನೀರು ಸಂಗ್ರಹಣ ಘಟಕಕ್ಕೆ 4 ಹೆ. ಜಮೀನಿನಲ್ಲಿ ಕಡ್ಡಾಯವಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಬೇಕು/ಬೆಳೆದಿರಬೇಕು. ಸದಸ್ಯರ ಹೆಸರು, ಸರ್ವೆ ನಂಬರ್, ಬೆಳೆಯ ಹೆಸರು ಮತ್ತು ಬೆಳೆಗಳ ವಿಸ್ತೀರ್ಣದ ಬಗ್ಗೆ ಮಾಹಿತಿ ನೀಡುವುದು. 4. ವೈಯಕ್ತಿಕ/ಸಮುದಾಯ "ನೀರು ಸಂಗ್ರಹಣಾ ಘಟಕ" ಘಟಕವನ್ನು ನಿರ್ಮಾಣ ಮಾಡಿಕೊಳ್ಳಲು ಫಲಾನುಭವಿಯು/ ಸಂಘ/ಸಂಸ್ಥೆ/ಗುಂಪು ಒಪ್ಪಂದದೊಂದಿಗೆ ನಿರ್ಮಿಸಿಕೊಳ್ಳಲು ಅವಕಾಶವಿದ್ದು, ಪ್ರತಿಯೊಬ್ಬ ರೈತ ಫಲಾನುಭವಿಯು "ನೀರು ಸಂಗ್ರಹಣಾ ಘಟಕ" ಘಟಕವನ್ನು ಕನಿಷ್ಠ 5 ವರ್ಷಗಳವರೆಗೆ ನಿರ್ವಹಣೆ ಮಾಡಿ ಪರಿಣಾಮಕಾರಿಯಾಗಿ ನೀರನ್ನು ತೋಟಗಾರಿಕೆ ಬೆಳೆಗಳಿಗೆ ಉಪಯೋಗಿಸಿಕೊಳ್ಳುತ್ತೇನೆಂದು, ತಪ್ಪಿದಲ್ಲಿ, ಸಹಾಯಧನದ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಜಮಾ/ಹಿಂತಿರುಗಿಸುತ್ತೇನೆಂದು ಹಾಗೂ ಘಟಕದಲ್ಲಿ ಯಾವುದೇ ತರಹದ ಅನಾಹುತ ಸಂಭವಿಸಿದಲ್ಲಿ ಪ್ರಾಣ ಹಾನಿಯಾದಲ್ಲಿ ಸಂಬಂಧಪಟ್ಟ ಫಲಾನುಭವಿಯೇ ಜವಾಬ್ದಾರರೆಂದು ಒಪ್ಪಿ, ರೂ.200.00 ಗಳ ಇ-ಛಾಪಾ ಕಾಗದದಲ್ಲಿ ಸ್ವಯಂ ದೃಢೀಕರಣ ನೀಡಬೇಕು.

ಮಳೆ ನೀರು ಸಂಗ್ರಹಣಾ ಘಟಕ ನಿರ್ಮಿಸಲು ಒಟ್ಟು 79 ಅರ್ಜಿಗಳು ಸಲ್ಲಿಕೆಯಾಗಿದ್ದು, 56 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ. ಮೀಸಲಿಡಲಾಗಿರುವ ಸಹಾಯಧನದ ವಿವರ ಈ ಕೆಳಕಂಡಂತಿದೆ.

(ಭೌತಿಕ ಸಂಖ್ಯೆ/ ಆರ್ಥಿಕ ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು	ಸಮುದಾಯ ಕೆರೆ		ವೈಯಕ್ತಿಕ ಕೃಷಿ ಹೊಂಡ		ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರಾಷ್ಟ್ರೀಯ ತೋಟಗಾರಿಕೆ ಮಿಷನ್	16	66.40	22	16.5	38	82.90
2	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	0	0	18	51.00	18	51.00
ಒಟ್ಟು		16	66.40	40	67.5	56	133.9

ಉ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ತೋಟಗಾರಿಕಾ ಕೃಷಿಕರ ಸಂಖ್ಯೆ ಎಷ್ಟು ಮತ್ತು ಅವರು ಹೊಂದಿರುವ ಜಮೀನೆಷ್ಟು; ಇವರಿಗಾಗಿ ನೀಡಲಾಗುತ್ತಿರುವ ಯೋಜನೆಗಳಾವುವು?

ಬೀದರ್ ಜಿಲ್ಲೆಯ ಪರಿಶಿಷ್ಟ ಜಾತಿಯ ತೋಟಗಾರಿಕೆ ಕೃಷಿಕರ ಸಂಖ್ಯೆ 30,373 ಇದ್ದು, ಇವರು 41,640 ಹೆಕ್ಟೇರ್ ಜಮೀನು ಹೊಂದಿರುತ್ತಾರೆ ಹಾಗೂ ಪರಿಶಿಷ್ಟ ಪಂಗಡದ ತೋಟಗಾರಿಕಾ ಕೃಷಿಕರ ಸಂಖ್ಯೆ 32,443 ಇದ್ದು, ಇವರು 47,203 ಹೆಕ್ಟೇರ್ ಜಮೀನನ್ನು ಹೊಂದಿರುತ್ತಾರೆ. ಸದರಿ ರೈತರಿಗೆ ಈ ಕೆಳಕಂಡ ಯೋಜನೆಗಳಡಿಯಲ್ಲಿ ಸಹಾಯಧನ ನೀಡಲಾಗುತ್ತಿದೆ.

ಕ್ರ. ಸಂ.	ಯೋಜನೆಯ ಹೆಸರು
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)
3	ರಾಷ್ಟ್ರೀಯ ತೋಟಗಾರಿಕೆ ಮಿಷನ್
4	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
6	SMAM ತೋಟಗಾರಿಕೆಯಲ್ಲಿ ಯಾಂತ್ರೀಕರಣ.
7	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ
8	ಸಮಗ್ರ ತೋಟಗಾರಿಕಾ ಅಭಿವೃದ್ಧಿ
9	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
10	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ

HORTI / 146 / HGM / 2021

(ಮುನಿರತ್ನ)

ಮಾನ್ಯ ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಅನುಬಂಧ

2018-19 ರಿಂದ 2020-21 ನೇ ಸಾಲಿನವರೆಗೆ ವಿವಿಧ ಯೋಜನೆಗಳಿಗೆ ಬೀದರ್ ಜಿಲ್ಲೆಗೆ ಒದಗಿಸಿರುವ, ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನದ ವಿವರ

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೋಜನೆ	2018-19			2019-20			2020-21			ಒಟ್ಟು		
		ಮಂಜೂರು	ಬಿಡುಗಡೆ	ಸಾಧನೆ	ಮಂಜೂರು	ಬಿಡುಗಡೆ	ಸಾಧನೆ	ಮಂಜೂರು	ಬಿಡುಗಡೆ	ಸಾಧನೆ	ಮಂಜೂರು	ಬಿಡುಗಡೆ	ಸಾಧನೆ
I	ರಾಜ್ಯವಲಯ ಯೋಜನೆಗಳು												
1	[illegible] ಉಪಯೋಜನೆ ಮತ್ತು [illegible] ಉಪ ಯೋಜನೆ ಕಾಯ್ದೆ 2013 ರಡಿ [illegible] ಮೊತ್ತ	6.17	6.17	6.17	0.00	0.00	0.00	4.00	4.00	4.00	10.17	10.17	10.17
2	ಸಮಗ್ರ ತೋಟಗಾರಿಕಾ ಅಭಿವೃದ್ಧಿ	297.99	297.99	280.42	188.78	188.78	181.24	251.10	251.10	251.08	737.87	737.87	712.75
3	ಕೃಷಿ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ	121.76	121.76	121.75	96.17	96.17	96.17	12.20	12.20	12.20	230.13	230.13	230.12
4	[illegible] ಅಭಿವೃದ್ಧಿ	37.84	37.84	42.63	70.68	62.42	60.90	76.08	76.06	70.35	184.60	176.34	173.87
5	ತೋಟಗಾರಿಕೆ ಬೆಳೆಗಳ [illegible] ಮತ್ತು [illegible]	15.50	15.50	15.40	19.00	19.00	18.97	14.00	14.00	13.98	48.50	48.50	48.35
6	ತೋಟಗಾರಿಕೆ ಕಟ್ಟಡಗಳು	0.00	0.00	0.00	30.00	30.00	30.00	0.00	0.00	0.00	30.00	30.00	30.00
7	ಕೃಷಿ ಭಾಗ್ಯ (ತೋಟಗಾರಿಕೆ)	107.52	107.52	107.03	32.99	32.99	15.10	0.00	0.00	0.00	140.51	140.51	122.13
8	[illegible] ಅಭಿವೃದ್ಧಿ ಯೋಜನೆ -II ([illegible]-II) [illegible]	179.55	108.00	105.89	48.24	48.24	48.10	0.00	0.00	0.00	227.79	156.24	153.99
9	ತೋಟಗಾರಿಕೆ ಉತ್ಪನ್ನಗಳ [illegible] ಮತ್ತು [illegible]	1.00	1.00	0.99	1.00	1.00	0.99	1.00	1.00	1.00	3.00	3.00	2.98
10	ಮಧುವನ ಮತ್ತು ಜೇನು ಸಾಕಣೆ ಅಭಿವೃದ್ಧಿ	3.00	3.00	3.00	8.03	8.03	8.00	10.00	10.00	9.98	21.03	21.03	20.98
	ಒಟ್ಟು	770.33	698.78	683.28	494.87	488.83	459.48	368.38	368.38	362.58	1633.58	1553.79	1505.34
II	ಜಿಲ್ಲಾವಲಯ ಯೋಜನೆಗಳು												
1	ತೋಟಗಾರಿಕೆ ಬೆಳೆಗಳ [illegible]	25.50	25.50	23.76	25.40	25.40	25.14	25.40	25.40	25.02	76.30	76.30	73.92
2	ತೋಟಗಾರಿಕೆ ಕಟ್ಟಡಗಳು	17.50	17.50	17.50	20.00	20.00	20.00	37.12	37.12	26.94	74.62	74.62	64.44
3	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	2.50	2.50	2.49	2.50	2.50	2.50	2.50	2.50	2.50	7.50	7.50	7.49
4	ತೆಂಗು [illegible] ಮತ್ತು [illegible]	2.00	2.00	0.00	2.00	2.00	2.00	2.00	2.00	1.99	6.00	6.00	3.99
5	[illegible]	5.60	5.48	5.48	5.60	5.58	5.58	0.00	0.00	0.00	11.20	11.06	11.06
	ಒಟ್ಟು	53.10	52.98	49.23	55.50	55.48	55.22	67.02	67.02	56.45	175.62	175.48	160.90
	ಒಟ್ಟಾರೆ	823.43	751.76	732.51	550.37	542.11	514.69	435.40	435.40	419.04	1809.20	1729.27	1666.24

ತೋಟಗಾರಿಕೆ ಜಂಟಿ ನಿರ್ದೇಶಕರು
ಯೋಜನೆ